41

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಡಾ.ತಳವಾರ ಸಾಬಣ್ಣಾ ಇವರು ನಿಯಮ-72 ರಡಿಯಲ್ಲಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆ:**

**ಸೂಚನೆ:-**

ಪರಿಶಿಷ್ಟ ಸಮುದಾಯಗಳ ಒಳಮೀಸಲಾತಿ ವರ್ಗೀಕರಣಕ್ಕಾಗಿ ರಚಿಸಿದ ನ್ಯಾಯಮೂರ್ತಿ ಶ್ರೀ ನಾಗಮೋಹನದಾಸ ಆಯೋಗದ ವರದಿ ವಿಳಂಬತೆ, ಸರಕಾರದ ನಿಗಮ ಮಂಡಳಿಗಳ ಅಸಹಕಾರ ಧೋರಣೆ ಮತ್ತು ಸರಕಾರದ ನೇಮಕಾತಿಗಳಲ್ಲಿ ತಡೆ ಕುರಿತು.

ಪರಿಶಿಷ್ಟ ಸಮುದಾಯಗಳಿಗೆ ಒಳಮೀಸಲಾತಿ ವರ್ಗೀಕರಣ ಕೈಗೊಳ್ಳುವ ನಿಮಿತ್ಯ ನ್ಯಾಯಮೂರ್ತಿ ಶ್ರೀ ಎಚ್ ಎನ್.ನಾಗಮೋಹನದಾಸ ನೇತೃತ್ವದ ಏಕ ಸದಸ್ಯ ಆಯೋಗ ರಚಿಸಿ ಮೂರು ತಿಂಗಳಲ್ಲಿ ವರದಿ ನೀಡಲು ಆದೇಶಿಸಿತು. ಆದರೆ ಆಯೋಗ ರಚನೆಯಾಗಿ 06 ತಿಂಗಳಾದರು ವರದಿ ಸಿದ್ಧವಾಗದಿರುವುದು, ಸರಕಾರದಿಂದ, ನಿಗಮ-ಮಂಡಳಿಗಳಿಂದ ಅವಶ್ಯಕ ಸಹಕಾರ ಮತ್ತು ದತ್ತಾಂಶ ಪೂರೈಕೆಯಲ್ಲಿ ವಿಳಂಬ ನೀತಿ. ಇದರಿಂದ ಸರಕಾರದ ನೇರ ನೇಮಕಾತಿ ಮತ್ತು ಬಡ್ತಿಗಳಿಗೆ ತಡೆಯಾಗಿದ್ದು ಸಾವಿರಾರು ಉದ್ಯೋಗ ಆಕಾಂಕ್ಷಿಗಳಿಗೆ ತೊಂದರೆಯಾಗಿದೆ. ಹಾಗೆಯೇ ಒಳಮೀಸಲಾತಿ ವರ್ಗೀಕರಣವಾದ ವರದಿ ಸಲ್ಲಿಕೆ ಮತ್ತು ಅನುಷ್ಠಾನ ಕುರಿತು ಕಾಯುತ್ತಿರುವ ಪರಿಶಿಷ್ಟ ಸಮುದಾಯಗಳಿಗೆ ನಿರಾಸೆಯಾಗಿದೆ. ಇದರಿಂದ ಸರಕಾರದ ನಡೆಯ ಬಗ್ಗೆ ಜನರಿಗೆ ಸಂಶಯ ಉಂಟು ಮಾಡುತ್ತಿದೆ. ಈ ನಿಟ್ಟಿನಲ್ಲಿ ಇದೆಲ್ಲದ್ದಕ್ಕೆ ಕಾರಣಗಳು ಮತ್ತು ಸರಕಾರದ ಧೃಡ ನಿರ್ಧಾರ ಏನು ಎಂಬುದರ ಕುರಿತು ಚರ್ಚಿಸಲು ಸಮಾಜ ಕಲ್ಯಾಣ ಇಲಾಖೆಯ ಮಾನ್ಯ ಸಚಿವರ ಗಮನ ಸೆಳೆಯಲಾಗಿದೆ.

**ಉತ್ತರ:-**

ಕರ್ನಾಟಕ ರಾಜ್ಯದಲ್ಲಿ ಶಿಕ್ಷಣ ಮತ್ತು ಸರ್ಕಾರಿ ಸೇವೆಗಳಲ್ಲಿ ಪರಿಶಿಷ್ಟ ಜಾತಿಯ ವಿವಿಧ ಉಪಜಾತಿಗಳಿಗೆ ಸೇರಿದವರ ಕುರಿತು Empirical Data ಪಡೆದು ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ(ಉಪ ವರ್ಗೀಕರಣ) ಬಗ್ಗೆ ಸೂಕ್ತ ಶಿಫಾರಸ್ಸಿಗಳೊಂದಿಗೆ ಎರಡು ತಿಂಗಳ ಅವಧಿಯೊಳಗಾಗಿ ವರದಿ ಸಲ್ಲಿಸಲು ಆಯೋಗ ವಿಚಾರಣಾ ಕಾಯ್ದೆ 1952ರ (Commission of Inquiry Act 1952) (ಕೇಂದ್ರ ಕಾಯ್ದೆ ಸಂ.60 ) ಸೆಕ್ಷನ್ (3)ರಲ್ಲಿ ನೀಡಲಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರಾದ ಶ್ರೀ ಹೆಚ್.ಎನ್.ನಾಗಮೋಹನ್ ದಾಸ್ ಇವರ ಅಧ್ಯಕ್ಷತೆಯಲ್ಲಿ ಸರ್ಕಾರದ ಆದೇಶ ಸಂಖ್ಯೆ:SWD/8/SLP/2024(P-1), ದಿನಾಂಕ:12-11-2024ರಂದು ಏಕ ಸದಸ್ಯ ಆಯೋಗವನ್ನು ರಚಿಸಲಾಗಿದ್ದು, ಸದರಿ ವಿಚಾರಣಾ ಆಯೋಗಕ್ಕೆ Terms of reference ಗಳನ್ನು ಸರ್ಕಾರದ ಆದೇಶ ಸಂಖ್ಯೆ:SWD/8/SLP/2024 (P-1), ದಿನಾಂಕ:03-12-2024 ರಂದು ಹೊರಡಿಸಲಾಗಿದೆ. ಸದರಿ ಆದೇಶದಲ್ಲಿ ಆಯೋಗವು ತನ್ನ ಅಧಿಕಾರ ವಹಿಸಿಕೊಂಡ ದಿನಾಂಕದಿಂದ 60 ದಿನಗಳ ಅವಧಿಯಲ್ಲಿ ಸರ್ಕಾರಕ್ಕೆ ವರದಿ ನೀಡಲು ಸೂಚಿಸಲಾಗಿರುತ್ತದೆ.

ಆಯೋಗವು ದಿನಾಂಕ: 04-12-2024 ರಂದು ಕಾರ್ಯಭಾರ ವಹಿಸಿಕೊಂಡಿದ್ದು, ಪರಿಶಿಷ್ಟ ಜಾತಿಯ ವಿವಿಧ ಉಪಜಾತಿಗಳ ಬಗ್ಗೆ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪಿನಂತೆ ಅಗತ್ಯ ಮಾಹಿತಿಗಳನ್ನು ಸಂಗ್ರಹಿಸುತ್ತಿದೆ. ಆದಿ ಕರ್ನಾಟಕ, ಆದಿ ದ್ರಾವಿಡ ಮತ್ತು ಆದಿ ಆಂಧ್ರ ಎಂಬ ಪರಿಶಿಷ್ಟ ಜಾತಿಗಳು ಕರ್ನಾಟಕ ಪರಿಶಿಷ್ಟ ಜಾತಿ ಪಟ್ಟಿಯಲ್ಲಿದ್ದು, ಸದರಿ ಮೂರು ಪದಗಳನ್ನು ಕೆಲವು ಪರಿಶಿಷ್ಟ ಜಾತಿಯ ಸಮುದಾಯಗಳು ಬಳಕೆ ಮಾಡಲಾಗುತ್ತಿದ್ದು,ಸದರಿ ಜಾತಿಗಳಿಗೆ ಸಂಬಂಧಿಸಿದ ಉಪ ಜಾತಿಗಳ ಜನಸಂಖ್ಯೆ 2011ರ ಜನಗಣತಿಯಲ್ಲಿ ಇಲ್ಲದೇ

ಇರುವುದರಿಂದ ಆ ಮಾಹಿತಿಯನ್ನೂ ಸಹ ಸಂಗ್ರಹಿಸಬೇಕಾಗಿದೆ. ಸದರಿ ಆಯೋಗದಿಂದ ದಿನಾಂಕ:10-01-2025 ರಂದು ಎಲ್ಲಾ ಸರ್ಕಾರಿ ಇಲಾಖೆಗಳು/ನಿಗಮ /ಮಂಡಳಿ/ ಸಂಸ್ಥೆಗಳು/ವಿಶ್ವ ವಿದ್ಯಾಲಯಗಳಿಂದ ವಿವಿಧ ಪರಿಶಿಷ್ಟ ಜಾತಿಗಳ ಅಂಕಿ-ಅಂಶಗಳನ್ನು ಒದಗಿಸಲು ಪತ್ರ ಬರೆಯಲಾಗಿದೆ. ಆಯೋಗದ ನಿರ್ದೇಶನದ ಮೇರೆಗೆ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಂದಲೂ ಸಹ ಎಲ್ಲಾ ಸರ್ಕಾರಿ ಇಲಾಖೆಗಳು/ ನಿಗಮ /ಮಂಡಳಿ/ ಸಂಸ್ಥೆಗಳು/ವಿಶ್ವ ವಿದ್ಯಾಲಯಗಳಿಂದ ಅಗತ್ಯ ಮಾಹಿತಿ ಒದಗಿಸುವಂತೆ ದಿನಾಂಕ:14-02-2025ರಂದು ಟಿಪ್ಪಣಿ ಹೊರಡಿಸಲಾಗಿದೆ. ನಿಗದಿತ ನಮೂನೆಗಳಲ್ಲಿ ಮಾಹಿತಿಯನ್ನು ಆನ್‌ಲೈನ್ ಮೂಲಕ ಪಡೆಯಲು ವೆಬ್-ಪೋರ್ಟಲ್ ನ್ನು ಸಿದ್ಧಪಡಿಸಲಾಗಿದೆ. ಅಗತ್ಯ ಮಾಹಿತಿಯನ್ನು ಪಡೆಯಲು ಎಲ್ಲಾ ರೀತಿಯ ಕ್ರಮವಹಿಸಲಾಗುತ್ತಿದೆ. ಮಾನ್ಯ ವಿಧಾನ ಪರಿಷತ್ ಸದಸ್ಯರು, ಪ್ರಸ್ತಾಪಿಸಿರುವಂತೆ ಏಕ ಸದಸ್ಯ ಆಯೋಗ ರಚನೆಯಾಗಿ 6 ತಿಂಗಳ ಅವಧಿಯಾಗಿರುವುದಿಲ್ಲ. ಆದರೂ ಸದರಿ ಆಯೋಗಕ್ಕೆ ಸರ್ಕಾರದಿಂದ ಅಗತ್ಯ ಸಹಕಾರ ನೀಡಿ, ಶೀಘ್ರವಾಗಿ ವರದಿ ಪಡೆಯಲು ಕ್ರಮವಹಿಸಲಾಗುವುದು.

**No: SWD/190/SLP/2025**

**(ಡಾ||ಹೆಚ್.ಸಿ.ಮಹದೇವಪ್ಪ)**
ಸಮಾಜ ಕಲ್ಯಾಣ ಸಚಿವರು.